


ಒಂದು ದಿನ ಬೆಳಿಗ್ಗೆ ಫೋನಿನ ಟ್ರಿನ್... ಟ್ರಿನ್... ಶಬ್ದ ನನ್ನನ್ನು ಬೆಚ್ಚಿಬೀಳಿಸಿತು. ಬಹಳ ಹೊತ್ತಿನಿಂದಲೂ ಬಾರಿಸುತ್ತಿದ್ದಿರಬೇಕು. ಫೋನ್ ತೆಗೆದುಕೊಳ್ಳಲು ನಾನು ಕೈಚಾಚಿದ್ದೆನಷ್ಟೆ... ಅತ್ತೆಯ ಧ್ವನಿ ಅಪ್ಪಳಿಸಿತು... "ಯಾರದ್ದು ಫೋನು?" ನಾನು ಉತ್ತರಿಸದಿದ್ದಾಗ ಅವರೇ ಮಂಚದ ಬಳಿ ಬಂದು ಅದೇ ಪ್ರಶ್ನೆಯನ್ನು ಪುನಃ ಪುನಃ ಕೇಳತೊಡಗಿದರು. ನಾನು ಗದ್ಗದಿತ ಸ್ವರದಲ್ಲಿ ಹೇಳಿದೆ... "ಅವರಿಗೆ ಹಾರ್ಟ್‌ಫೇಲ್ ಆಗಿಬಿಟ್ಟಿದೆ..." ಅತ್ತೆ ಚೀರುತ್ತ ಪ್ರಜ್ಞಾಹೀನರಾದರು. ಅವರ ಆರ್ತನಾದ ಕೇಳಿ ಇಬ್ಬರು ಮಕ್ಕಳೂ ನನ್ನ ನಡುಗುತ್ತಿದ್ದ ಕಾಲುಗಳನ್ನು ಅಪ್ಪಿಕೊಂಡುಬಿಟ್ಟರು. ಅವರನ್ನು ಎದೆಗವುಚಿಕೊಂಡು ಸಮಾಧಾನಪಡಿಸಿದೆ. ಮಕ್ಕಳಿಗೂ ಏನೂ ಅರ್ಥವಾಗಲಿಲ್ಲ. ನನ್ನ ಎದೆಗೆ ಅಂಟಿಕೊಂಡು ಬಿಕ್ಕಳಿಸಲಾರಂಭಿಸಿದರು.

ಅಮ್ಮನಿಗೆ ಫೋನ್ ಮಾಡಿ ವಿಷಯ ತಿಳಿಸಿದೆ.

ಅಮ್ಮ ಬಂದ ಕೂಡಲೆ ನನ್ನನ್ನು ಒಂದು ಮೂಲೆಗೆ ಕರೆದುಕೊಂಡು ಹೋಗಿ ಖಡಕ್ಕಾಗಿ ಕೇಳಿದಳು... "ಎಲ್ಲಿಯಾದ್ರೂ ನೀನು ಆ ನಿನ್ನ ಕನಸಿನ ರಾಜಕುಮಾರನ ಬಗ್ಗೆ ಹೇಳಿಲ್ಲಾ ತಾನೆ!" ನಾನು ನಿರಾಸೆ ಕಣ್ಣುಗಳಿಂದ ಅಮ್ಮನ ಪೇಲವವಾದ ಮುಖವನ್ನು ನೋಡಿದೆ. ಗಾಜಿನ ಬಳೆಗಳ ಬಗ್ಗೆ ನನಗೆ ಬಾಲ್ಯದಿಂದಲೂ ಒಂದು ರೀತಿಯ ಹೆದರಿಕೆಯೇ ಇತ್ತು. ಅವತ್ತು ಅಮ್ಮನ ಕೈಗಳ ಗಾಜಿನ ಬಳೆಗಳನ್ನು ಕಲ್ಲಿನ ಮೇಲೆ ಇಟ್ಟು ಜಜ್ಜಿದಾಗ ಅವಳ ಬಿಳಿಯ ಕೈಗಳಿಗೆ ಚುಚ್ಚಿಕೊಂಡಿದ್ದ ಬಳೆಯ ಸಣ್ಣಚೂರುಗಳ ಆ ದೃಶ್ಯ ಇಂದೂ ನನ್ನ ಮನದಾಳದಲ್ಲಿ ನೆಟ್ಟಿದೆ. ಗಾಜಿನ ಬಳೆಗಳ ಬಗ್ಗೆ ನನಗೆ ಆಸಕ್ತಿ ಇಲ್ಲದೇ ಹೋದದ್ದು ಒಳ್ಳೆಯದೇ ಆಯಿತು. ಇಲ್ಲದೇ ಹೋಗಿದ್ದರೆ ನಾನೂ ಸಹ ಈ ಪದ್ಧತಿಯನ್ನು ನೆರವೇರಿಸಬೇಕಾಗುತ್ತಿತ್ತು. ಈಗ ನೋಡಿದರೆ ಮೂಗುನತ್ತಿನದೇ ಸಮಸ್ಯೆಯಾಗಿದೆ. ಎಲ್ಲಾ ಕಡೆಯಿಂದಲೂ ವಿಭಿನ್ನ ಅಭಿಪ್ರಾಯಗಳು ಬರುತ್ತವೆ. ಆದರೆ ಅವೆಲ್ಲವೂ ನಿರರ್ಥಕವಾದವು. ಕೊನೆಗೆ ಶಬ್‌ರಾತನ್ ಅಜ್ಜಿಯನ್ನು ಕರೆಯಲಾಯಿತು.

ಮತ್ತೆ...

ಅಜ್ಜಿ ತೀರ್ಮಾನ ಹೇಳಿದಳು: "ಈ ದರಿದ್ರ ಮೂಗುನತ್ತನ್ನು ಕತ್ತರಿಯಿಂದ ಕತ್ತರಿಸಿಹಾಕಿ. ಇನ್ನಾವ ಸೌಭಾಗ್ಯಕ್ಕಾಗಿ ಇದನ್ನು ಧರಿಸಬೇಕು?..." ಬಟ್ಟೆಯನ್ನು ಕತ್ತರಿಸುವ ದೊಡ್ಡ ಕತ್ತರಿಯನ್ನು ತರಿಸಲಾಯಿತು. ನನಗೆ ಹೆದರಿಕೆಯಿಂದ ನಡುಕ ಉಂಟಾಯಿತು. ನೋವನ್ನು ತಡೆದುಕೊಳ್ಳುವ ಸಲುವಾಗಿ ಉಸಿರನ್ನು ಬಿಗಿ ಹಿಡಿದುಕೊಂಡೆ. ಬಹುಶಃ ಅಮ್ಮನಿಗೆ ಕರುಣೆ ಬಂತು ಅನ್ನಿಸುತ್ತೆ. ಆಕೆ ಪಲ್ಲಂಗದ ಅಂಚಿಗೆ ನನ್ನ ತಲೆಯನ್ನು ಒರಗಿಸಿಕೊಂಡು ಶಕ್ತಿಯನ್ನೆಲ್ಲ ಉಪಯೋಗಿಸಿ ನತ್ತನ್ನು ಕಿತ್ತಳು. ವೇದನೆಯ ಅಲೆ ನನ್ನ ಕಿವಿಗಳಿಂದ ಹೊರಟು ಗಂಟಲು ತನಕ ಆವರಿಸಿತು.

ಒಬ್ಬ ವಿಧವೆಯ ಮುಖದ ಮೇಲಿದ್ದ ಮುತ್ತೈದೆತನದ ಕೊನೆಯ ಗುರುತನ್ನು ನಿವಾರಿಸಿದ ತೃಪ್ತಿ